# ಮಾತು ಹೇಗಿರಬೇಕು?

ಡಾ. ರೂಪಾ

> ಮಾತನಾಡುವ ಕಲೆಯನ್ನು ಯೋಗ್ಯ ರೀತಿಯಲ್ಲಿ ಉಪಯೋಗಿಸಿಕೊಂಡರೆ ವ್ಯಕ್ತಿ ಮತ್ತು ಸಮಾಜಹಿತ ಉಂಟಾಗುತ್ತದೆ ಎಂದು ಹೇಳುತ್ತಾರೆ ಮೈಸೂರು ಮಹಾರಾಜಾ ಕಾಲೇಜಿನಲ್ಲಿ ಸಂಸ್ಕೃತ ಪ್ರಾಧ್ಯಾಪಕರೂ ವಿಭಾಗದ ಮುಖ್ಯಸ್ಥರೂ ಆಗಿರುವ ಶ್ರೀಮತಿ ರೂಪಾ ಅವರು.

ಮಾತು ಮಾನವನಿಗೆ ಇರುವ ಒಂದು ವಿಶೇಷ ಶಕ್ತಿ. ಇದು ಜ್ಞಾನವನ್ನೂ ಭಾವನೆಯನ್ನೂ ಅನಿಸಿಕೆಯನ್ನೂ ಪಡೆಯಲು ಹಾಗೂ ತಿಳಿಸಲು ಇರುವ ಒಂದು ಮಾಧ್ಯಮ. ಮಾನವನ ಇಹಜೀವನದಲ್ಲಿ ಇದರ ಪಾತ್ರ ಅತಿ ಮುಖ್ಯ. ಇದು ಇಲ್ಲದ್ದರೆ ಮಾನವನ ಜೀವನ ಅಂಧಕಾರದಲ್ಲಿ ಮುಳುಗಿಬಿಡುತ್ತಿತ್ತು. ಇದನ್ನು ಸರಿಯಾಗಿ ಬಳಸಿಕೊಂಡರೆ ಸುಖವನ್ನೂ ಯಶಸ್ಸನ್ನೂ ಪಡೆಯಬಹುದು. ಇದನ್ನು ದುರುಪಯೋಗ ಮಾಡಿಕೊಂಡರೆ ದುಃಖಕ್ಕೂ ಅಪಯಶಸ್ಸಿಗೂ ಈಡಾಗಬೇಕಾಗುವುದು ನಿಶ್ಚಿತ. ಪ್ರಾಪಂಚಿಕ ಜೀವನದ ಆಗುಹೋಗುಗಳಿಗೆ ಸುಖದುಃಖಗಳಿಗೆ ಮಾತು ಬಹಳ ಮುಖ್ಯ ಕಾರಣ. ಒಳ್ಳೆಯ ಮಾತು ಸ್ನೇಹ-ಪ್ರೀತಿ-ಆದರಗಳನ್ನುಂಟುಮಾಡಿ ತನ್ಮೂಲಕ ಮನಸ್ಸಿಗೆ ಸುಖವನ್ನು ತಂದುಕೊಟ್ಟರೆ ಕೆಟ್ಟ ಮಾತು ಶತ್ರುತ್ವ ದ್ವೇಷ ಅನಾದರ ಮಾನಹಾನಿ ಇತ್ಯಾದಿಗಳನ್ನುಂಟುಮಾಡಿ ಮನಸ್ಸಿಗೆ ವ್ಯಥೆಯನ್ನುಂಟುಮಾಡುತ್ತದೆ.

ಮಾತು ದುಃಖಕ್ಕೆ ಕಾರಣವಾಗದೆ ಸುಖಕ್ಕೆ ಕಾರಣವಾಗುವಂತಿರಬೇಕಾದರೆ ಅದು ದೋಷವರ್ಜಿತವಾಗಿರಬೇಕು, ಗುಣಯುಕ್ತವಾಗಿರಬೇಕು. ಯಾವ ದೋಷಗಳಿಂದ ವರ್ಜಿತವಾಗಿರಬೇಕು, ಯಾವ ಗುಣಗಳಿಂದ ಯುಕ್ತವಾಗಿರಬೇಕು ಎಂಬುದನ್ನು ನೋಡೋಣ.

## ಮಾತಿನಲ್ಲಿ ಇರಬಾರದ ದೋಷಗಳು

i) **ಅಸತ್ಯತೆ :** ಮಾತು 'ಅಸತ್ಯತೆ' ಎಂಬ ದೋಷದಿಂದ ವರ್ಜಿತವಾಗಿರಬೇಕು. ಸುಳ್ಳಿನಿಂದ ಸ್ವರೂಪಹಾನಿ; ವ್ಯಕ್ತಿತ್ವಕ್ಕೇ ಕುಂದು. ಸುಳ್ಳಿನಿಂದ ಗೆಲುವು ಎಂದಿಗೂ ಸಾಧ್ಯವಿಲ್ಲ. ಸುಳ್ಳಿಗೆ ತಾತ್ಕಾಲಿಕವಾಗಿ ಗೆಲುವು ಇದ್ದಂತೆ ಕಂಡುಬಂದರೂ ಅಂತ್ಯದಲ್ಲಿ ಗೆಲುವು ಸಾಧ್ಯವಿಲ್ಲ. ಆದ್ದರಿಂದ 'ಸುಳ್ಳು' ಎಂಬುದು ಮಾತಿನಲ್ಲಿ ಇರಲೇಬಾರದು.

ii) **ಪೈಶುನ್ಯ (ಚಾಡಿ) :** ಮಾತಿನಲ್ಲಿ ಈ ದೋಷ ಇರಬಾರದು. ಚಾಡಿಯಿಂದ ಒಳ್ಳೆಯ ಪ್ರಯೋಜನವೇನೂ ಇರುವುದಿಲ್ಲ. ಅಲ್ಲದೆ 'ಚಾಡಿ'ಯು ವ್ಯಕ್ತಿ-ವ್ಯಕ್ತಿಗಳಲ್ಲಿ ಪರಸ್ಪರ ದ್ವೇಷ-ಒಡಕು-ಮನಸ್ತಾಪಾದಿಗಳನ್ನುಂಟುಮಾಡಿ ಅನಾಹುತಕ್ಕೆ ಕಾರಣವಾಗುತ್ತದೆ. ಆದ್ದರಿಂದ ಚಾಡಿಯನ್ನು ಸರ್ವಥಾ ವರ್ಜಿಸಬೇಕು.

iii) **ಅಸಂಬದ್ಧತೆ :** ಅಸಂಬದ್ಧವಾಗಿ (ಸಂಬಂಧವೇ ಇಲ್ಲದೆ) ಮಾತನಾಡುವುದು ನಿಷ್ಪ್ರಯೋಜಕ. ಕೆಲವೊಮ್ಮೆ ಅದರಿಂದ ಕಾರ್ಯಹಾನಿಯಾಗಲೂಬಹುದು, ವೈಷಮ್ಯಗಳಿಗೆ ಅವಕಾಶವಾಗಲೂ ಬಹುದು, ಕೊನೆಗೆ ದುಷ್ಪರಿಣಾಮವನ್ನೂ ಎದುರಿಸಬೇಕಾಗಬಹುದು. ಆದ್ದರಿಂದ ಮಾತನಾಡುವ ಮೊದಲು ಇದು ಸರಿಯೇ ಅಲ್ಲವೇ ಎಂದು ಸರಿಯಾಗಿ ಆಲೋಚಿಸಿ ಮಾತನಾಡಬೇಕು. ನಾವಾಡುವ ಮಾತಿನ ಶಬ್ದ, ವಾಕ್ಯ ಮತ್ತು ಅರ್ಥಗಳಲ್ಲಿ ಪರಸ್ಪರ ಸಂಬಂಧವಿರಬೇಕು—ಗೊಂದಲ ಉಂಟುಮಾಡುವಂತಿರಬಾರದು.

iv) **ಕಠೋರತೆ :** ಕಠೋರವಾದ ಮಾತಿನಿಂದ ಮನಸ್ಸಿಗೆ ನೋವಾಗುತ್ತದೆ. ಅದರಿಂದಾಗುವ ಗಾಯ ಭೌತಿಕವಾಗಿ ಆಗುವ ಯಾವುದೇ ತೀವ್ರವಾದ ಗಾಯಕ್ಕಿಂತಲೂ ಹೆಚ್ಚಾಗಿರುತ್ತದೆ.

**ರೋಹತೇ ಸಾಯಕೈರ್ವಿದ್ಧಂ ವನಂ ಪರಶುನಾ ಹತಮ್ ।**
**ವಾಚಾ ದುರುಕ್ತಂ ಬೀಭತ್ಸಂ ನ ಸಂರೋಹತಿ ವಾಕ್ಕ್ಷತಮ್ ॥**

'ಬಾಣಗಳಿಂದಾದ ಗಾಯ ಗುಣವಾಗುತ್ತದೆ. ಕೊಡಲಿಯಿಂದ ಕಡಿಯಲ್ಪಟ್ಟ ವನವು ಚಿಗುರುತ್ತದೆ. ಆದರೆ ಕೆಟ್ಟ ಮಾತಿನಿಂದಾದ ಗಾಯ ಅತ್ಯಂತ ಭಯಾನಕವಾದುದು. ಅದು ಗುಣವಾಗುವುದಿಲ್ಲ.'

ಕೆಟ್ಟ ಮಾತನ್ನು ಆಡಿದವರ ಮೇಲೆಯೂ ಅದು ಪರಿಣಾಮವನ್ನು ಬೀರದೇ ಇರುವುದಿಲ್ಲ. ಆಡಿದವರ ಮನಸ್ಸೂ ಕೆಟ್ಟ ಮಾತಿನಿಂದ ಕಲುಷಿತವಾಗುತ್ತದೆ; ಅವರ ಮನಶ್ಶಾಂತಿ ಕದಡುತ್ತದೆ. ಇದರಿಂದ ದೈಹಿಕ ಆರೋಗ್ಯವೂ ಹಾಳಾಗುತ್ತದೆ. ಹೀಗೆ ಆಡಿದವರು, ಆಡಿಸಿಕೊಂಡವರು, ಕೇಳಿದವರು ಎಲ್ಲರೂ ದುಷ್ಪರಿಣಾಮವನ್ನು ಎದುರಿಸಬೇಕಾಗುತ್ತದೆ. ಆದ್ದರಿಂದ ಮಾತಿನಲ್ಲಿ ಕಠೋರತೆಯನ್ನು ಸರ್ವಥಾ ವರ್ಜಿಸಬೇಕು.

## ಮಾತಿನಲ್ಲಿರಬೇಕಾದ ಗುಣಗಳು

i) **ಸಂತೋಷಜನಕತ್ವ :** ಮಾತು ಸಂತೋಷವನ್ನುಂಟುಮಾಡುವ ರೀತಿಯಲ್ಲಿ ಇರಬೇಕು. ಪ್ರಿಯವಾದ ಮಾತಿನಿಂದ ಸ್ನೇಹ

---

ನಿನ್ನ ನಾಲಗೆ ನುಡಿಯದೆ, ನಿನ್ನ ನಡತೆ ನುಡಿಯಲಿ.
*(Let not your tongue speak, let your character speak.)*
—ಸ್ವಾಮಿ ಪ್ರೇಮಾನಂದ.

ಪ್ರಪಂಚದಲ್ಲಾದ ಅತ್ಯಂತ ಒಳಿತು ಮತ್ತು ಕೆಡುಕುಗಳಿಗೆ ದಕ್ಕೂ ನಾಲಗೆಯೇ ಕಾರಣ *(The tongue is the instrument of the greatest good and the greatest evil that is done in the world - Sir W. Raliegh)*

ವರ್ಧಿಸುತ್ತದೆ. ಇದರಿಂದ ಮಾನವಸಂಬಂಧ ಚೆನ್ನಾಗಿರುತ್ತದೆ. ಇಂತಹ ಮಾತನ್ನು ಆಡುವವರ ಮನಸ್ಸಿಗೂ ಕೇಳುವವರ ಮನಸ್ಸಿಗೂ ಹಿತ ವಾಗುತ್ತದೆ, ಆನಂದವಾಗುತ್ತದೆ. ಇದರಿಂದ ದೇಹಾರೋಗ್ಯವೂ ಚೆನ್ನಾಗಿರುತ್ತದೆ. ಆದ್ದರಿಂದ ಪ್ರಿಯವಾದ ಮಾತನ್ನಾಡುವುದು ಎಲ್ಲ ರೀತಿಯಿಂದಲೂ ಒಳ್ಳೆಯದು.

'ಒಳ್ಳೆಯ ಮಾತಿನಿಂದ ಎಲ್ಲ ಪ್ರಾಣಿಗಳಿಗೂ ಸಂತೋಷ ವಾಗುತ್ತದೆ. ಆದ್ದರಿಂದ ಅಂತಹ ಮಾತುಗಳನ್ನೇ ಆಡಬೇಕು. ಒಳ್ಳೆಯ ಮಾತಿಗೆ ಬಡತನವೇಕೆ?' ಎಂದು ಈ ಸುಭಾಷಿತ ಪ್ರಶ್ನಿಸುತ್ತದೆ :

ಪ್ರಿಯವಾಕ್ಯಪ್ರದಾನೇನ ಸರ್ವೇ ತುಷ್ಯಂತಿ ಜಂತವಃ |
ತಸ್ಮಾತ್ತದೇವ ವಕ್ತವ್ಯಂ ವಚನೇ ಕಾ ದರಿದ್ರತಾ ||

'ಒಳ್ಳೆಯ ಮಾತಿನಿಂದ ಇಡೀ ಜಗತ್ತನ್ನೇ ವಶಪಡಿಸಿಕೊಳ್ಳ ಬಹುದು' ಎನ್ನುತ್ತದೆ ಈ ಕೆಳಗಿನ ಸುಭಾಷಿತ:

ನಾದಾತವ್ಯಂ ನ ದಾತವ್ಯಂ ಕರ್ತವ್ಯಂ ನ ಚ ಕಿಂಚನ |
ಸಾಂತ್ವಮೇಕಂ ಪ್ರಯೋಕ್ತವ್ಯಂ ಸರ್ವಂ ತಸ್ಯ ವಶೇ ಜಗತ್ ||

'ಏನನ್ನೂ ತೆಗೆದುಕೊಳ್ಳಬೇಕಾಗಿಲ್ಲ, ಏನನ್ನೂ ಕೊಡ ಬೇಕಾಗಿಲ್ಲ. ಏನನ್ನೂ ಮಾಡಬೇಕಾದ್ದೂ ಇಲ್ಲ. ಒಳ್ಳೆಯ ಮಾತ ನ್ನಾಡುತ್ತಿದ್ದರೆ ಸಾಕು. ಇಡೀ ಜಗತ್ತೇ ಅವನ ವಶವಾಗಿ ಬಿಡುತ್ತದೆ' ಎಂದು ಇದರ ಅರ್ಥ.

ii) **ಸತ್ಯತೆ** : ಮಾತು ಪ್ರಿಯವಾಗಿರುವುದಲ್ಲದೆ ಸತ್ಯವಾಗಿಯೂ ಇರಬೇಕು. ಸತ್ಯದಿಂದ ತಾತ್ಕಾಲಿಕವಾಗಿ ಕಷ್ಟ ಒದಗಿದರೂ ಅಂತ್ಯ ದಲ್ಲಿ ಜಯ ನಿಶ್ಚಿತ. ಸಂತೋಷಜನಕತ್ವ ಮತ್ತು ಸತ್ಯತೆ— ಇವೆರಡನ್ನೂ ಹೊಂದಿಸಿಕೊಂಡು ಮಾತನಾಡಬೇಕು. ಅಂದರೆ, ಪ್ರಿಯ ವಾದ ಸತ್ಯವನ್ನು ಹೇಳಬೇಕು. ಪ್ರಿಯವಾಗುವ ರೀತಿಯಲ್ಲಿ ಸತ್ಯವನ್ನು ಹೇಳಬೇಕು. ಅಪ್ರಿಯವಾದ ಸತ್ಯವನ್ನು ಹೇಳಬಾರದು. ಅಪ್ರಿಯ ವಾದ ಸತ್ಯವನ್ನು ಹೇಳಬೇಕಿದ್ದರೆ ಅದನ್ನು ಅಪ್ರಿಯವಾಗುವ ರೀತಿ ಯಲ್ಲಿ ಹೇಳಬಾರದು, ಪ್ರಿಯವಾಗುವ ರೀತಿಯಲ್ಲಿ ಹೇಳಬೇಕು— **ಸತ್ಯಂ ಬ್ರೂಯಾತ್ ಪ್ರಿಯಂ ಬ್ರೂಯಾತ್** |ಹಾಗೆಯೇ ಪ್ರಿಯವಾದ ಸುಳ್ಳನ್ನೂ ಹೇಳಬಾರದು, ಪ್ರಿಯವನ್ನುಂಟುಮಾಡು ವುದಕ್ಕಾಗಿ ಸುಳ್ಳನ್ನು ಹೇಳಬಾರದು— **ಪ್ರಿಯಂ ಚ ನಾನೃತಂ ಬ್ರೂಯಾತ್** |

ಇಂತಹ ಮಾತನ್ನಾಡುವ ರೀತಿಯೂ (ಉಚ್ಚರಿಸುವ ರೀತಿಯೂ) ಸಹ ಶುದ್ಧವಾಗಿರಬೇಕು. ಅಂದರೆ—ಅತಿ ವೇಗವಾಗಿಯೂ ಮಾತ ನಾಡಬಾರದು, ಅತಿ ನಿಧಾನವಾಗಿಯೂ ಮಾತನಾಡಬಾರದು. ಅತಿ ಉಚ್ಚ ಸ್ವರದಲ್ಲಿಯೂ ಮಾತನಾಡಬಾರದು, ಅತಿ ಮಂದ್ರ ಸ್ವರದಲ್ಲಿಯೂ ಮಾತನಾಡಬಾರದು. ಮಾತಿನಲ್ಲಿ ವ್ಯಾಕರಣ ಶುದ್ಧಿಯೂ ಇರಬೇಕು. ಈ ರೀತಿಯ ಮಾತು ಚೇತೋಹಾರಿ ಯಾಗಿರುತ್ತದೆ.

ವಾಲ್ಮೀಕಿ ರಾಮಾಯಣದಲ್ಲಿ ರಾಮಲಕ್ಷ್ಮಣರು ಸೀತೆಯನ್ನು ಹುಡುಕುತ್ತಾ ಋಷ್ಯಮೂಕ ಪರ್ವತದೆಡೆಗೆ ಬರುತ್ತಿರುವುದನ್ನು ಕಂಡ ಸುಗ್ರೀವನು ಅವರು ಯಾರೆಂಬುದನ್ನು ತಿಳಿದು ಬರಬೇಕೆಂದು ಹೇಳಿ ಹನುಮಂತನನ್ನು ಕಳುಹಿಸಿದಾಗ ಹನುಮಂತನು ರಾಮಲಕ್ಷ್ಮಣರನ್ನು ಸಂಧಿಸಿ ಅವರೊಡನೆ ಮಾತನಾಡಿದ ರೀತಿಯನ್ನು ಪ್ರಶಂಸಿಸುತ್ತಾ ಲಕ್ಷ್ಮಣನಿಗೆ ರಾಮನು ಹೇಳುವ ಮಾತುಗಳನ್ನು ಗಮನಿಸಿದರೆ ಮಾತು ಯಾವ ರೀತಿ ಇರಬೇಕು ಎಂಬುದರ ಅರಿವಾಗುತ್ತದೆ.

'ಇವನು (ಹನುಮಂತನು) ಇಷ್ಟೊಂದು ಮಾತನಾಡಿದರೂ ಒಂದೂ ಅಪಶಬ್ದ ಬರಲಿಲ್ಲ—**ಬಹು ವ್ಯಾಹರತಾನೇನ ನ ಕಿಂಚಿದಪಶಬ್ದಿತಮ್** |; ಮುಖ, ಕಣ್ಣು, ಹಣೆ, ಹುಬ್ಬು ಅಥವಾ ಇತರ ಯಾವ ಅಂಗಗಳಲ್ಲೂ ವಿಕಾರ ಕಾಣಲಿಲ್ಲ—**ನ ಮುಖೇ ನೇತ್ರಯೋರ್ವಾಪಿ ಲಲಾಟೇ ಚ ಭ್ರುವೋಸ್ತಥಾ | ಅನ್ಯೇಷ್ವಪಿ ಚ ಗಾತ್ರೇಷು ದೋಷಃ ಸಂವಿದಿತಃ ಕ್ವಚಿತ್**| ; ಇವನ ಮಾತು ಅತಿ ವಿಸ್ತಾರವಾಗಿಯೂ ಇಲ್ಲ—**ಅವಿಸ್ತರಂ** ; ಸಂದೇಹಕ್ಕೆ ಆಸ್ಪದ ವಾಗುವಂತೆ (ಅತಿ ಚಿಕ್ಕದಾಗಿಯೂ) ಇಲ್ಲ—**ಅಸಂದಿಗ್ಧಂ** ; ಅತಿ ವೇಗವಾಗಿಯೂ ಇಲ್ಲ, ಅತಿ ನಿಧಾನವಾಗಿಯೂ ಇಲ್ಲ— **ಅದ್ರುತಾಮವಿಲಂಬಿತಾಮ್** ; ವ್ಯಾಕರಣಶುದ್ಧವಾಗಿಯೂ ಇದೆ— **ಸಂಸ್ಕಾರಕ್ರಮಸಂಪನ್ನಾಂ**' (ಕಿ.ಕಾಂ. ೩.೨೯-೩೨).

ಇಂತಹ 'ಒಳ್ಳೆಯ ಮಾತೇ ಮಾನವನಿಗೆ ಭೂಷಣ' ಎನ್ನುವ ಈ ಸುಭಾಷಿತವನ್ನು ನೋಡಿ—

> **ಮೂರ್ಖನ ಹೃದಯ ಅವನ ಬಾಯಿಯಲ್ಲಿರುತ್ತದೆ, ಜ್ಞಾನಿಯ ಬಾಯಿ ಅವನ ಹೃದಯದಲ್ಲಿರುತ್ತದೆ**
>
> **—ಬೆಂಜಮಿನ್ ಫ್ರಾಂಕ್ಲಿನ್.**

ವಾಣ್ಯೇಕಾ ಸಮಲಂಕರೋತಿ ಪುರುಷಂ
ಯಾ ಸಂಸ್ಕೃತಾ ಧಾರ್ಯತೇ |
ಕ್ಷೀಯಂತೇ ಖಲು ಭೂಷಣಾನಿ ಸತತಂ
ವಾಗ್ಭೂಷಣಂ ಭೂಷಣಮ್ ||

'ಸುಸಂಸ್ಕೃತವಾದ ಮಾತೇ ಮನುಷ್ಯನಿಗೆ ಶಾಶ್ವತವಾದ ಅಲಂಕಾರ. (ಮುತ್ತು-ರತ್ನಾದಿ ಇತರ) ಅಲಂಕಾರಗಳು ಕಾಲಕ್ರಮೇಣ ನಶಿಸುತ್ತವೆ. ಮಾತಿನ ಅಲಂಕಾರವೇ ನಿಜವಾದ ಅಲಂಕಾರ.'

ಚೆನ್ನಾಗಿ ವಶದಲ್ಲಿರಿಸಿಕೊಂಡಿರುವ, ಶುದ್ಧವಾದ ಮಾತು-ಮನಸ್ಸುಗಳಿಂದ ವೇದಾಂತದ ಎಲ್ಲ ಫಲವನ್ನು ಪಡೆಯಬಹುದು ಎಂದು ಮನುಸ್ಮೃತಿಯಲ್ಲಿ ಹೇಳಿರುವ ಈ ಶ್ಲೋಕವನ್ನು ನೋಡಿ :

ಯಸ್ಯ ವಾಙ್ಮನಸೀ ಶುದ್ಧೇ ಸಮ್ಯಗ್ಗುಪ್ತೇ ಚ ಸರ್ವದಾ |
ಸ ವೈ ಸರ್ವಮವಾಪ್ನೋತಿ ವೇದಾಂತೋಪಗತಂ ಫಲಮ್ ||

ಇಂತಹ ಗುಣಯುಕ್ತ ದೋಷರಹಿತ ಮಾತಿನಿಂದಾಗುವ ಪ್ರೇರಣೆಯೇ ಸರ್ವಾರ್ಥ ಸಿದ್ಧಿಗೂ ಕಾರಣವಾಗುತ್ತದೆ ಎಂದು ವಾಲ್ಮೀಕಿಗಳು ರಾಮನಿಂದ ಹೇಳಿಸಿರುವ ಈ ವಾಕ್ಯವೂ ಗಮನಾರ್ಹ:

ತಸ್ಯ ಸಿದ್ಧ್ಯಂತಿ ಸರ್ವಾರ್ಥಾ ದೂತವಾಕ್ಯಪ್ರಚೋದಿತಾಃ |

*